**<u>ಸಾಕ್ಷಿಯನ್ನು ದಿನಾಂಕಃ 11.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರಿದ ಪಾಟೀಸವಾಲುಃ ವಾದಿಗಳ ಪರ ಶ್ರೀ ಕೆ.ಎಸ್.ಎಂ, ವಕೀಲರಿಂದಃ</u>**

ನಿಡಿ-1 ನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿದ ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ. ಈ ದಾವೆ ದಾಖಲಿಸುವುದಕ್ಕಿಂತ ಮೊದಲು ನಾನು ಕಂದಾಯ ಪಾವತಿಸಿರುತ್ತೇನೆ. ಸದರಿ ದಾಖಲೆಯನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ದಾವಾ ಸ್ವತ್ತಿನ ಒಟ್ಟು ವಿಸ್ತೀರ್ಣ 2 ಎಕರೆ 33 ಗುಂಟೆ ಎಂದರೆ ಸರಿ. ಸದರಿ ವಿಸ್ತೀರ್ಣದ ಪೈಕಿ 1 ಎಕರೆ 33 ಗುಂಟೆ ವಿಸ್ತೀರ್ಣವನ್ನು ನನ್ನ ಹೆಸರಿಗೆ ಮತ್ತು 1 ಎಕರೆಯನ್ನು 1 ನೇ ಪ್ರತಿವಾದಿಯ ಹೆಸರಿಗೆ ಕಾನೂನುಬಾಹಿರವಾಗಿ ಖಾತೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಸರ್ವೆ ನಂ. 451/2 ರಲ್ಲಿರುವ 1 ಎಕರೆ 33 ಗುಂಟೆ ಪೈಕಿ 19 ಗುಂಟೆ ಜಮೀನು ವರುಣಾ ನಾಲೆಗಾಗಿ ಭೂಸ್ವಾಧೀನವಾಗಿರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರ್ವೆ ನಂ.451/1 ರಲ್ಲಿ ಭೂಸ್ವಾಧೀನವಾಗಿರುತ್ತದೆ. ಸರ್ವೆ ನಂ. 451/2 ರಲ್ಲಿ ವರುಣಾ ನಾಲೆಗೆ ಭೂಸ್ವಾಧೀನವಾಗಿರುವುದಿಲ್ಲ. ಲಿಖಿತ ಹೇಳಿಕೆಯ 9 ನೇ ಖಂಡಿಕೆಯಲ್ಲಿ 1 ಎಕರೆ 33 ಗುಂಟೆ ಪೈಕಿ ವರುಣಾ ನಾಲೆಗೆ 19 ಗುಂಟೆ ಬೂಸ್ವಾಧೀನವಾಗಿರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರ್ವೆ ನಂ.451/1 ರಲ್ಲಿ ಭೂಸ್ವಾಧೀನವಾಗಿರುತ್ತದೆ. ಈ ರೀತಿ ಭೂಸ್ವಾಧೀನವಾಗಿ ಪ್ರತಿವಾದಿಯೇ ಪರಿಹಾರ ಪಡೆದಿರುತ್ತಾರೆಂದು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-4 ರಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಪಂಚಾಯತ್ ಪಾರಿಕತ್ ಪ್ರಕಾರ ಖಾತೆಯಾಗಿರುತ್ತದೆ ಎಂದು ನಮೂದಿಸಿದುದ, ಆ ರೀತಿ ಪಂಚಾಯತ್ ಪಾರಿಕತ್ ಯಾವಾಗ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಲಿಖಿತ ಹೇಳಿಕೆಯಲ್ಲಿ ದಿನಾಂಕ 05.10.1997 ರಂದು

ಪಾಲುಪಟ್ಟಿಯಾಗಿರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಈ ರೀತಿ ದಿನಾಂಕ 05.10.1997 ರಂದು ಪಂಚಾಯತ್ ಪಾಲುಪಟ್ಟಿಯಾಗಿರುತ್ತದೆ ಎಂದು ಲಿಖಿತ ಹೇಳಿಕೆಯಲ್ಲಿ ಹೇಳಿದ್ದು, ಅದಕ್ಕಿಂತ ಮುಂಚೆಯೇ ನಿಡಿ-4 ರಂತೆ ಕಾನೂನುಬಾಹಿರವಾಗಿ ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತೇನೆ ಎಂದರೆ ಪಂಚಾಯತ್ ಪಾಲುಪಟ್ಟಿಯಾದ ನಂತರ ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತೇನೆ. ನಿಡಿ-4 ರಂತೆ ಖಾತೆಯಾಗುವಾಗ ಪಂಚಾಯತ್ ಪಾಲುಪಟ್ಟಿ ಕೊಟ್ಟಿರುವ ಬಗ್ಗೆ ನನಗೆ ನೆನಪಿಲ್ಲ. ನಿಡಿ-4 ರಂತೆ ಖಾತೆ ಮಾಡಿಸಿಕೊಳ್ಳುವಾಗ ನಮ್ಮ ಕುಟುಂಬದಲ್ಲಿ ಯಾವುದೇ ಪಾಲುಪಟ್ಟಿಯಾಗಿರಲಿಲ್ಲ ಮತ್ತು ವಾದಿಗೆ ಸೇರಿದ ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಈ ರೀತಿ ಕಾನೂನುಬಾಹಿರವಾಗಿ ಖಾತೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈ ದಿನ ನ್ಯಾಯಾಲಯದಲ್ಲಿರುವ 1 ನೇ ವಾದಿ ಮಹದೇವಸ್ವಾಮಿಯವರ ತಾತನ ಹೆಸರು ಸಿದ್ದಮಲ್ಲಯ್ಯ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯ ಹೆಸರು ಸಿದ್ದಮಲ್ಲಪ್ಪ ಎಂದರೆ ನನ್ನ ತಂದೆಯನ್ನು ಸಿದ್ದಮಲ್ಲಪ್ಪ ಮತ್ತು ಸಿದ್ದಮಲ್ಲಯ್ಯ ಎಂತಲೂ ಕರೆಯುತ್ತಿದ್ದರು. ನನ್ನ ತಂದೆಯನ್ನು ಸಿದ್ದಮಲ್ಲಯ್ಯ ಎಂದು ಕರೆಯುತ್ತಿದ್ದರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳ ತಾತ ಮತ್ತು ನನ್ನ ತಂದೆ ಬೇರೆ-ಬೇರೆ ವ್ಯಕ್ತಿಗಳಾಗಿರುತ್ತಾರೆ ಎಂದರೆ ಸರಿ. ನನ್ನ ತಂದೆಗೆ ದಾವಾ ಸ್ವತ್ತು ಭೂನ್ಯಾಯ ಮಂಡಳಿಯಿಂದ ಆದೇಶದ ಪ್ರಕಾರ ಮಂಜೂರಾದ ಸ್ವತ್ತಾಗಿರುತ್ತದೆ. ಈ ವಿಚಾರವನ್ನು ಲಿಖಿತ ಹೇಳಿಕೆಯಲ್ಲಾಗಲಿ ಅಥವಾ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಾಗಲಿ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಲಿಖಿತ ಹೇಳಿಕೆಯಲ್ಲಿ ಮತ್ತು ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ದಾವಾ ಸ್ವತ್ತು ಪಿತ್ರಾರ್ಜಿತ ಸ್ವತ್ತು ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಒಂದು ವೇಳೆ ಭೂನ್ಯಾಯ ಮಂಡಳಿ ಆದೇಶದ ಪ್ರಕಾರ ನನ್ನ ತಂದೆಗೆ ಮಂಜೂರಾಗಿದ್ದರೆ ಅದರಂತೆ ಪಹಣಿ ಪತ್ರಿಕೆಯಲ್ಲಿ ನನ್ನ ತಂದೆಯ ಹೆಸರಿಗೆ

ದಾಖಲಾದ ಬಗ್ಗೆ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಭೂ ನ್ಯಾಯ ಮಂಡಳಿಯ ಆದೇಶದಂತೆ ನನ್ನ ತಂದೆಯ ಹೆಸರಿಗೆ ದಾಖಲಾದ ಬಗ್ಗೆ ದಾಖಲೆಯನ್ನು ಹಾಜರುಪಡಿಸುತ್ತೇನೆ. ದಾವಾ ಸ್ವತ್ತು ವಾದಿಗಳ ಕುಟುಂಬಕ್ಕೆ ಸೇರಿದ ಆಸ್ತಿಯಾಗಿದ್ದು, ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಸಿದ್ದಮಲ್ಲಪ್ಪ ಆಗಿದ್ದು, ವಾದಿಗಳ ತಾತ ಸಿದ್ದಮಲ್ಲಯ್ಯರವರ ಹೆಸರಿಗೆ ಭೂ ನ್ಯಾಯ ಮಂಡಳಿಯಿಂದ ದಾವಾ ಸ್ವತ್ತು ಮಂಜೂರಾಗಿದ್ದು, ಅವರ ಹೆಸರನ್ನು ದುರುಪಯೋಗಪಡಿಸಿಕೊಂಡು ನನ್ನ ತಂದೆಗೆ ಮಂಜೂರಾಗಿರುತ್ತದೆ ಎಂದು ಸುಳ್ಳುಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-1 ಮತ್ತು 4 ರಲ್ಲಿ ನನ್ನ ತಂದೆಯ ಹೆಸರು ಸಿದ್ದಮಲ್ಲಪ್ಪ ಎಂದು ನಮೂದಾಗಿರುತ್ತದೆ ಎಂದರೆ ಸರಿ.

**ಮರುವಿಚಾರಣೆಃ** ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,**

**ನಂಜನಗೂಡು.**